ಮಾಲೀಕರ ವಿಳಾಸವಿಲ್ಲದೆ ಅರ್ಜಿ ಹಾಕದೇ ಇರುವುದು, ಸುಮಾರು 4,032 ಪ್ರಕರಣ ಉಚ್ಚ ನ್ಯಾಯಾಲಯಕ್ಕೆ ಹೋಗಿರುವುದು - ಇವುಗಳು ಪರಿಹಾರ ಪಾವತಿಗೆ ಮುಖ್ಯ ತೊಡಕುಗಳಾಗಿವೆ.

ಆದಾಗ್ಯೂ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡು ಬಾಕಿ ಉಳಿದಿರುವ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಕರ್ನಾಟಕ ಗೃಹ ಮಂಡಳಿ ನೌಕರರ ಬೇಡಿಕೆಗಳು.

1161 (2047) **ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಗೃಹ ಮಂಡಳಿ ನೌಕರರು, ಸರ್ಕಾರಕ್ಕೆ ಹಲವಾರು ಬೇಡಿಕೆಗಳನ್ನು ಸಲ್ಲಿಸಿರುವುದು ನಿಜವೇ?

ಆ) ಆ ಬೇಡಿಕೆಗಳು ಯಾವುವು?

ಇ) ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಹೌದು,

ಆ) ಬೇಡಿಕೆಗಳ ವಿವರಗಳನ್ನು ಅನುಭಂಧದಲ್ಲಿ ನೀಡಲಾಗಿದೆ.

ಇ) ಸದರಿ ಬೇಡಿಕೆಗಳ ಬಗ್ಗೆ ಈಗಾಗಲೇ ಅಂದರೆ ದಿನಾಂಕ:1-7-96 ರಂದು ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಸದರಿ ಸಭೆ ನಡೆವಳಿಗಳ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಕರ್ನಾಟಕ ಗೃಹ ಮಂಡಳಿಯ ನೌಕರರ ಬೇಡಿಕೆಗಳು.

1) ಸಿ ಅಂಡ್ ಆರ್ ಪ್ರಕಾರ ಶೇಕಡ 50 ರಷ್ಟು ಎರವಲು ಸೇವೆಯನ್ನು ವಾಪಸ್ಸು ಕಳುಹಿಸುವುದರ ಬಗ್ಗೆ.

2) ಕಂದಾಯ ಅಧಿಕಾರಿಯವರನ್ನು ವಿಭಾಗದಲ್ಲೇ ನೇಮಿಸುವುದರ ಬಗ್ಗೆ.

3) ಬೋನಸ್ ನೀಡುವುದರ ಬಗ್ಗೆ.

4) 25 ಜನ ನೌಕರರಿಗೆ ಕಾಲಿಕ ವೇತನವನ್ನು ನೀಡುವ ಬಗ್ಗೆ.

5) ಕೆಂಪಾಪುರದಲ್ಲಿನ ಬಾಡಿಗೆ ವಸತಿ ಗೃಹಗಳನ್ನು ಸ್ವಂತಕ್ಕೆ ನೀಡುವುದರ ಬಗ್ಗೆ.

6) ಕಾಲಿಕ ವೇತನ ನೌಕರರನ್ನು ಖಾಯಂ ಮಾಡುವ ಬಗ್ಗೆ.

7) 5 ವರ್ಷ ಸೇವೆ ಸಲ್ಲಿಸಿದ ದಿನಗೂಲಿ ನೌಕರರಿಗೆ ಕಾಲಿಕ ವೇತನ ನೀಡುವುದರ ಬಗ್ಗೆ.

8) 2ನೇ ಹಂತದ ವಿಕೇಂದ್ರಿಕರಣ ಮಾಡುವುದರ ಬಗ್ಗೆ.

9) "ಡಿ" ದರ್ಜೆ ನೌಕರರಿಗೆ ದಪೇದಾರ್ ಹುದ್ದೆ ನೀಡುವುದರ ಬಗ್ಗೆ.

10) 10 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಟೈಂಬಾಂಡ್ ನೀಡುವುದರ ಬಗ್ಗೆ.

11) ಬಿಲ್ ಕಲೆಕ್ಟರ್‌ಗೆ ಎರಡನೇ ದರ್ಜೆ ಸಹಾಯಕರ ವೇತನವನ್ನು ನೀಡುವುದರ ಬಗ್ಗೆ.

12) ಮಂಡಳಿಯ ಅಧಿಕಾರಿಗಳಿಗೆ ಅಧಿಕಾರ ನೀಡುವುದರ ಬಗ್ಗೆ.

ಹೆಚ್ಚುವರಿ ಬೇಡಿಕೆಗಳು

1) ಮಂಡಳಿ ನೌಕರರಿಗೆ ಜೀಪ್ವತ್ ಆಧಾರದ ಮೇಲೆ ಮನೆ, ನಿವೇಶನಗಳನ್ನು ನೀಡುವುದರ ಬಗ್ಗೆ.

2) ಸಂಕೀರ್ಣ ಕೂಲಿ ನೌಕರರಿಗೆ ಮಂಡಳಿ ಸಭೆಯಲ್ಲಿ ತೀರ್ಮಾನವಾದಂತೆ ವೇತನ ಶ್ರೇಣಿಯನ್ನು ನೀಡುವುದು.

3) 1986 ಮಂಡಳಿಯ ಸಭೆಯಲ್ಲಿ ಕಾಲಿಕ ವೇತನವನ್ನು ದಿನಗೂಲಿ ನೌಕರರಿಗೆ ನೀಡಲಾಯಿತು. ಅಂದರೆ 1987, 1988 ಮತ್ತು 1989ರ ವಾರ್ಷಿಕ ಇನ್‌ಕ್ರಿಮೆಂಟ್ ನೀಡುವುದು.

4) ದಿನಗೂಲಿಯಲ್ಲಿ ಕೆಲಸಮಾಡುತ್ತಿದ್ದ ನೌಕರರನ್ನು ವರ್ಕ್‌ಚಾರ್ಜ್ ಹುದ್ದೆಗೆ ನೇಮಿಸಿಕೊಳ್ಳಲಾಯಿತು. ಇವರು 10 ವರ್ಷ ಸೇವೆ ಸಲ್ಲಿಸಿದ್ದರೂ ಖಾಯಂ ಮಾಡಿರುವುದಿಲ್ಲ. ಅಂದರೆ ಮುಂದಿನ ಮಂಡಳಿ ಸಭೆಯಲ್ಲಿ ಮಂಡಿಸಿ ಖಾಯಂ ಮಾಡುವುದು.

5) ದಿನಾಂಕ: 15-6-96 ರಂದು ಸಲ್ಲಿಸಿದ ಸಾಮೂಹಿಕ ರಜೆಯನ್ನು ಸಾಂಧರ್ಬಿಕ ರಜೆಯನ್ನಾಗಿ ಮಂಜೂರು ಮಾಡುವುದರ ಬಗ್ಗೆ.

ವಿಷಯ:- ಚಿಕ್ಕಮಗಳೂರು ಕ್ಷೇತ್ರದಲ್ಲಿ ಆಶ್ರಯ ಯೋಜನೆಯ ಮನೆಗಳು

1163(1448) **ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):-** ಮಾನ್ಯ ವಸತಿ ಸಚಿವರು ಈ ಕೆಳ- ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1993-94, 94-95 ಹಾಗೂ 95-96ನೇ ಸಾಲಿನಲ್ಲಿ ಚಿಕ್ಕಮಗಳೂರು ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಆಶ್ರಯ ಮನೆಗಳನ್ನು ನಿರ್ಮಿಸಲಾಗಿದೆ?

ಆ) ಇದಕ್ಕೆ ಖರ್ಚಾದ ಹಣವೆಷ್ಟು?

ಇ) ಈ ಮನೆಗಳ ಫಲಾನುಭವಿಗಳಿಗೆ ಎಷ್ಟು ಹಣ ನೀಡಬೇಕಾಗಿದೆ ಹಾಗೂ ಯಾವಾಗ ಹಣ ನೀಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಚಿಕ್ಕಮಗಳೂರು (ಗ್ರಾ) ಜಿಲ್ಲೆಯ ಚಿಕ್ಕಮಗಳೂರು ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಕೆಳಕಂಡಂತೆ ಮನೆಗಳನ್ನು ನಿರ್ಮಿಸಲಾಗಿದೆ.

1993-94ನೇ ಸಾಲಿನಲ್ಲಿ	- 283	
1994-95ನೇ ಸಾಲಿನಲ್ಲಿ	- 115	} 155
1995-96ನೇ ಸಾಲಿನಲ್ಲಿ	- 40	